**ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು. ದಿನಾಂಕ : 30-10-2023.**

**ಮುಂದುವರೆದ ಮುಖ್ಯ ವಿಚಾರಣೆ - ವಾದಿಯ ಪರ ವಕೀಲರಿಂದ :**

**2)** ನಾನು ಈ ಕೆಳಕಂಡ ದಾಖಲೆಗಳನ್ನು ಹಾಜರುಪಡಿಸಿದ್ದೇನೆ.

**3)** ನಮ್ಮ ತಂದೆ ಮಾಡಿಕೊಟ್ಟಿರುವ ದಿ.18-07-1996 ರ ವಿಲ್ ನಾಮೆಯನ್ನು - ನಿ.ಪಿ.54 ಎಂದು ಗುರುತಿಸಲಾಯಿತು.

**ಪಾಟೀ ಸವಾಲು - 5 ರಿಂದ 7 ನೇ ಪ್ರತಿವಾದಿಗಳ ಪರ ವಕೀಲರಿಂದ**

ನಮ್ಮ ತಂದೆ ದಿ.02-08-1998 ರಂದು ಮರಣ ಹೊಂದಿರುತ್ತಾರೆ. ನಮ್ಮ ತಂದೆ ಮತ್ತು ನಮ್ಮ ತಾತನ ಎರಡನೇ ಹೆಂಡತಿಯ ಮಗ ಸುಬ್ಬಣ್ಣ ಒಟ್ಟಾಗಿ ವಾಸವಿದ್ದರು ಎಂದರೆ ಸರಿಯಲ್ಲ. ನಮ್ಮ ತಂದೆ ಮತ್ತು ಸದರಿ ಸುಬ್ಬಣ್ಣ ಅವರ ಮಧ್ಯೆ ವಿಭಾಗ ಆಗಿದೆಯೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ. ಒಟ್ಟು ಕುಟುಂಬ ಆಗಿರುವುದಿಲ್ಲ. ನಮ್ಮ ತಂದೆ ನಂಜಪ್ಪ ಅವರು ಕುಟುಂಬದ ಯಜಮಾನರಾಗಿರುವುರಿಂದ ಆಸ್ತಿಯ ವಿಚಾರಗಳನ್ನು ಅವರೇ ನೋಡಿಕೊಳ್ಳುತ್ತಿದ್ದರು. ನಮ್ಮ ತಂದೆ ಮತ್ತು ನಮ್ಮ ಚಿಕ್ಕಪ್ಪ ಸುಬ್ಬಣ್ಣ ಒಟ್ಟು ಕುಟುಂಬದಿಂದ ಬಂದ ಆದಾಯದಿಂದ ಕೆಲವು ಆಸ್ತಿಗಳನ್ನು ಮೈಲನಹಳ್ಳಿಯಲ್ಲಿ ಮತ್ತು ಕೆಲವು ಆಸ್ತಿಗಳನ್ನು ಬೆಂಗಳೂರಿನಲ್ಲಿ ಖರೀದಿಸಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಆಸ್ತಿಗಳನ್ನು ಒಟ್ಟು ಕುಟುಂಬದ ಆದಾಯದಿಂದ ಖರೀದಿಸಿರುತ್ತಾರೆ ಎಂದರೆ ಸರಿಯಲ್ಲ. ನಿ.ಪಿ.54 ನ್ನು ಬರೆಯುವ ಸಮಯಕ್ಕೆ ನಮ್ಮ ತಂದೆ ಬೆಂಗಳೂರಿನಲ್ಲಿ ನಮ್ಮ ಮನೆಯಲ್ಲಿ ಹಾಗೂ ಮೈಲನಹಳ್ಳಿಯ ನಮ್ಮ ಅಕ್ಕನ ಮನೆಯಲ್ಲಿ ವಾಸವಿರುತ್ತಿದ್ದರು. ನಮ್ಮ ತಂದೆ ಬೆಂಗಳೂರಿನಲ್ಲಿ ಮೂರು ನಿವೇಶನಗಳನ್ನು ಖರೀದಿಸಿರುತ್ತಾರೆ. ಯಾವ ವರ್ಷ ಖರೀದಿಸಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಹಾಗೆ ಖರೀದಿಸುವ ಸಮಯದಲ್ಲಿ ನನಗೆ ಎಷ್ಟು ವರ್ಷ ವಯಸ್ಸು ಆಗಿತ್ತು ಎಂದು ನನಗೆ ಗೊತ್ತಿಲ್ಲ. ಹಾಗೆ ಖರೀದಿಸುವ ಸಮಯದಲ್ಲಿ ನಮ್ಮ ತಂದೆ ಹಾಗೂ ಸುಬ್ಬಣ್ಣ ಅವರು ಒಟ್ಟು ಕುಟುಂಬದಲ್ಲಿ ವಾಸವಿದ್ದರು ಎಂದರೆ ಸರಿಯಲ್ಲ. ನಮ್ಮ ತಂದೆ ವಿದ್ಯಾವಂತರಾಗಿರಲಿಲ್ಲ, ಆದರೆ ಬುದ್ಧಿವಂತರಾಗಿದ್ದರು. ಸುಬ್ಬಣ್ಣ ಅವರು

ಅವಿದ್ಯಾವಂತರಾಗಿದ್ದು ಮೈಲನಹಳ್ಳಿಯಲ್ಲಿ ವ್ಯವಸಾಯ ಮಾಡಿಕೊಂಡು ಇದ್ದರು ಎಂದರೆ ಅವರ ಆಸ್ತಿಗಳನ್ನು ಮಾಡಿಕೊಂಡು ಇದ್ದರು ಎಂದು ನುಡಿಯುತ್ತೇನೆ. ಸುಬ್ಬಣ್ಣ ಅವರ ಆಸ್ತಿಗಳು ಯಾವುವೆಂದು ನನಗೆ ಗೊತ್ತಿಲ್ಲ. ಸುಬ್ಬಣ್ಣ ಅವರು ವ್ಯವಸಾಯದಿಂದ ಬಂದ ಆದಾಯದ ಬಗ್ಗೆ ನಮ್ಮ ತಂದೆ ಹಾಗೂ ಸುಬ್ಬಣ್ಣ ಅವರು ಕುಳಿತು ಮಾತನಾಡಿ ಸುಬ್ಬಣ್ಣ ಅವರ ಅವಶ್ಯಕತೆಗಳನ್ನು ನಮ್ಮ ತಂದೆಯೇ ಪೂರೈಸುತ್ತಿದ್ದರು ಎಂದರೆ ಸರಿಯಲ್ಲ. ಸುಬ್ಬಣ್ಣ ಅವರ ಆದಾಯದ ಹಣವನ್ನು ನಮ್ಮ ತಂದೆ ಆಸ್ತಿಗಳನ್ನು ಖರೀದಿಸಲು ಉಪಯೋಗಿಸುತ್ತಿದ್ದರು ಎಂದರೆ ಸರಿಯಲ್ಲ. ನಮ್ಮ ತಂದೆ ವಿಲ್ ನಾಮೆಯನ್ನು ಜುಲೈ 1996 ರಲ್ಲಿ ಬರೆದಿರುತ್ತಾರೆ. ಆ ರೀತಿ ವಿಲ್ ನಾಮೆ ಮಾಡಿರುವುದಾಗಿ ನಮ್ಮ ತಂದೆಯೇ ನನಗೆ ತಿಳಿಸಿದ್ದರು. ನಿ.ಪಿ.54 ರಲ್ಲಿ ನಮ್ಮ ಏನೆಲ್ಲಾ ಬರೆದಿದ್ದಾರೆ ಎಂದು ನನಗೆ ಗೊತ್ತು. ನಾನು ಅದನ್ನು ಓದಿ ಪರಿಪೂರ್ಣವಾಗಿ ತಿಳಿದುಕೊಂಡಿದ್ದೇನೆ. ವಿಲ್ ನಾಮೆಯ ಮೂಲ ಪ್ರತಿ ನನ್ನ ಬಳಿಯೇ ಇರಬೇಕು ಎಂದು ನಮೂದಾಗಿರುವ ವಿಚಾರ ನನಗೆ ಗೊತ್ತು. 1996 ರಲ್ಲಿ ವಿಲ್ ನಾಮೆ ಮಾಡಿದ್ದು, ನಮ್ಮ ತಂದೆ 1998 ರಲ್ಲಿ ಮರಣ ಹೊಂದಿರುತ್ತಾರೆ. ವಿಲ್ ನಾಮೆಯಲ್ಲಿ ನನ್ನ ಹೆಸರಿಗೆ 3-4 ಶೀಟು ಮನೆಗಳು, ನನ್ನ ಸಹೋದರಿಯರಿಗೆ ಸಹ 3-4 ಶೀಟು ಮನೆಗಳನ್ನು ಬರೆದಿರುತ್ತಾರೆ. ಸದರಿ ಸೈಟ್ ಗಳ ವಿಸ್ತೀರ್ಣ ತಲಾ 30X50 ಅಡಿ ಇರುತ್ತದೆ. ವಿಲ್ ನಾಮೆಯ ಸ್ವತ್ತು ಅಸಲು ದಾವಾ ಸಂಖ್ಯೆ 1521-2006 ರ ಐಟಂ ಸಂಖ್ಯೆ 17 ಆಗಿರುತ್ತದೆ ಎಂದರೆ ಗೊತ್ತಿಲ್ಲ. ನಮ್ಮ ತಂದೆ ವಿಲ್ ನಾಮೆ ಬರೆಯುವ ಸಮಯುದಲ್ಲಿ ಉಪನೋಂದಣಾಧಿಕಾರಿಗಳ ಕಛೇರಿಗೆ ನಾನೂ ಸಹ ಹೋಗಿದ್ದೆ ಎಂದರೆ ಸರಿಯಲ್ಲ. ಆ ಕಾರಣದಿಂದ ವಿಲ್ ನಾಮೆಯ ಮೂಲ ಪ್ರತಿ ನನ್ನ ಬಳಿಯೇ ಇರಬೇಕು ಎಂದು ನಾನು ಹೇಳಿ ಬರೆಸಿರುತ್ತೇನೆ ಎಂದರ ಸರಿಯಲ್ಲ. ನಮ್ಮ ತಂದೆ ಹೃದಯಾಘಾತವಾಗಿ ಮರಣ ಹೊಂದಿರುತ್ತಾರೆ. ನಮ್ಮ ತಂದೆ ವಿಲ್ ನಾಮೆ ಬರೆಯುವ ಸಮಯಕ್ಕೆ ಏನನ್ನಾದರೂ ಹೇಳಿದರೆ ತಿಳಿದುಕೊಳ್ಳುವ ಸಾಮರ್ಥ್ಯ ಅವರಿಗೆ ಇರಲಿಲ್ಲ ಎಂದರೆ ಸರಿಯಲ್ಲ. ನಮ್ಮ ಚಿಕ್ಕಪ್ಪನ ಮನೆಯವರಿಗೆ ಬೆಂಗಳೂರಿನ ಯಾವುದೇ ಆಸ್ತಿಯನ್ನು ಕೊಡಬಾರದು ಎಂಬ ಉದ್ದೇಶದಿಂದ ನಮ್ಮ ತಂದೆಯನ್ನು ಪ್ರಚೋದನೆ ಮಾಡಿ ವಿಲ್ ನಾಮೆ ಬರೆಸಿರುತ್ತೇವೆ ಎಂದರೆ ಸರಿಯಲ್ಲ. ವಿಲ್ ನಾಮೆಯ ಆಸ್ತಿಗಳು ಒಟ್ಟು ಕುಟುಂಬದ ಆಸ್ತಿಗಳಾಗಿರುವುದರಿಂದ ನಮ್ಮ ತಂದೆಗೆ ವಿಲ್ ನಾಮೆ ಬರೆದುಕೊಡುವ ಪರಿಪೂರ್ಣವಾದ ಹಕ್ಕು ಇರಲಿಲ್ಲ ಎಂದರೆ ಸರಿಯಲ್ಲ. ನಮ್ಮ ತಂದೆಗೆ ಆ ಬಗ್ಗೆ ಯಾವುದೇ ಉದ್ದೇಶ ಇಲ್ಲದೇ

ಇದ್ದರೂ ಸಹ ನಮ್ಮ ಒತ್ತಾಯದ ಮೇರೆಗೆ ವಿಲ್ ನಾಮೆ ಬರೆದಿದ್ದಾರೆ ಎಂದರೆ ಸರಿಯಲ್ಲ. ನಿ.ಪಿ.54 ರಲ್ಲಿ ಮೈಲನಹಳ್ಳಿಯ ಆಸ್ತಿಗಳನ್ನು 1 ಮತ್ತು 2 ನೇ ಪ್ರತಿವಾದಿಗಳಿಗೆ ನೀಡುತ್ತೇವೆ ಎಂದು ಬರೆದಿದ್ದಾರೆ ಎಂದರೆ ಸರಿ. ಆದರೆ ನನಗೆ ನೀಡುವುದಿಲ್ಲ ಎಂದು ಬರೆದಿರುವುದಿಲ್ಲ ಎಂದು ನುಡಿಯುತ್ತೇನೆ. 1 ಮತ್ತು 2 ನೇ ಪ್ರತಿವಾದಿಗಳ ಹೆಸರಿಗೆ ಮೈಲನಹಳ್ಳಿಯ 2 ಎಕರೆ ಜಮೀನು ಪ್ರತ್ಯೇಕವಾಗಿ ನೋಂದಣಿಯಾಗಿರುತ್ತದೆ ಎಂದು ಸಾಕ್ಷಿಯು ಸ್ವತಃ ನುಡಿಯುತ್ತಾರೆ. ಈ ದಾವೆಯಲ್ಲಿ ಕ್ರತ್ರಿಗುಪ್ಪೆಯ ಆಸ್ತಿಗಳು ಹಾಗೂ ಮೇಲೆ ಹೇಳಿದ 2 ಎಕರೆ ಜಮೀನನ್ನು ಸೇರಿಸಿರುತ್ತೇನೆ ಎಂದರೆ ಸರಿಯಲ್ಲ. ದಿ.19-12-1996 ರ ವಿಲ್ ನಾಮೆಯನ್ನು ಸೃಷ್ಟಿ ಮಾಡಿಕೊಳ್ಳಲಾಗಿದೆ ಎಂದು ನಾನು ಹೇಳಿದ್ದು, ನಮ್ಮ ತಂದೆ ಒಂದೇ ವಿಲ್ ನಾವೆಯನ್ನು ಮಾಡಿರುವುದರಿಂದ ಹಾಗೆ ಹೇಳುತ್ತಿದ್ದೇನೆ. ಸದರಿ ವಿಲ್ ನಾಮೆಯ ಮೇಲೆ ನಮ್ಮ ತಂದೆ ಸಹಿ ಮಾಡಿರುವುದಿಲ್ಲ. ನಾನು ದಿ.19-12-1996 ರ ವಿಲ್ ನಾಮೆಯ ಮೂಲ ದಾಖಲೆಯನ್ನು ನೋಡಿರುವುದಿಲ್ಲ. ನಾನು ಮೂಲ ದಾಖಲೆಯನ್ನು ನೊಡದೇ ನಮ್ಮ ತಂದೆ ಸಹಿ ಮಾಡಿರುವುದಿಲ್ಲ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ವಿಲ್ ನಾವೆಯನ್ನು ಪ್ರತಿವಾದಿಗಳು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದಾರೋ ಎಂದು ನನಗೆ ಗೊತ್ತಿಲ್ಲ. ಸದರಿ ವಿಲ್ ನಾಮೆಯನ್ನು ತರಿಸಿಕೊಳ್ಳಲು ನಾನು ನ್ಯಾಯಾಲಯಕ್ಕೆ ಯಾವುದೇ ಅರ್ಜಿಯನ್ನು ಸಲ್ಲಿಸಿರುವುದಿಲ್ಲ. ಆದಾಗ್ಯೂ ನಾನು ಸದರಿ ವಿಲ್ ನಾಮೆ ಸೃಷ್ಟಿ ಮಾಡಲಾಗಿದೆ ಎಂದು ಯಾವುದೇ ಆಧಾರ ಇಲ್ಲದೇ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ತಂದೆ ಮಂಚಪ್ಪನ ಹಳ್ಳಿಯಲ್ಲಿ ಸರ್ವೆ ಸಂಖ್ಯೆ 96-2 ರಲ್ಲಿ 3 ಎಕರೆ 6 ಗುಂಟೆ ಜಮೀನನ್ನು ಖರೀದಿಸಿದ ವಿಷಯ ನನಗೆ ಗೊತ್ತು. ಯಾವ ವರ್ಷ ಖರೀದಿಸಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಸದರಿ ಸ್ವತ್ತನ್ನೂ ಸಹ ನಮ್ಮ ತಂದೆ ಹಾಗೂ ಸುಬ್ಬಣ್ಣ ಅವರು ಒಟ್ಟಾಗಿ ಖರೀದಿಸಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಆಸ್ತಿಯ ಬಗ್ಗೆ ಅಸಲು ದಾವಾ ಸಂಖ್ಯೆ 7861-2007 ನ್ನು ಬೆಂಗಳೂರಿನ ಸಿಟಿ ಸಿವಿಲ್ ನ್ಯಾಯಾಲಯದಲ್ಲಿ ದಾಖಲಿಸಲಾಗಿತ್ತು ಎಂದರೆ ಸರಿ. ಸದರಿ ದಾವೆ ನಮ್ಮ ಪರವಾಗಿ ಆಗಿದೆ ಎಂದು ಸಾಕ್ಷಿಯು ಸ್ವತಃ ನುಡಿಯುತ್ತಾರೆ. ಮಂಚಪ್ಪನ ಹಳ್ಳಿಯ ಒಟ್ಟು 3 ಎಕರೆ 6 ಗುಂಟೆ ಯಲ್ಲಿ ನನಗೆ 2 ಎಕರೆ ನೀಡಿದ್ದು, ಆ ಕಾರಣದಿಂದ ನನ್ನನ್ನೂ ಸಹ ಪಕ್ಷಕಾರನ್ನಾಗಿ ಮಾಡಲಾಗಿದೆ.

**(ಈ ಹಂತದಲ್ಲಿ ನ್ಯಾಯಾಲಯದ ಅವಧಿ ಮುಗಿದಿರುವುದರಿಂದ ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶವನ್ನು ನೀಡಿ, ಪ್ರಕರಣವನ್ನು ಮುಂದೂಡಲಾಯಿತು).**

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

ಓ. ಹೇ.ಕೇ.ಸ.ಇ. ಎಂದು ಒಪ್ಪಿಕೊಂಡಿರುತ್ತಾರೆ,

Sd/-
**ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ.,**
**ದೇವನಹಳ್ಳಿ.**